ಮಾರ್ಪಡಿಸಿದ ರಾಷ್ಟ್ರೀಯ ಕೃಷಿ ವಿಮಾ ಯೋಜನೆ	2013–14ರ ಹಿಂಗಾರು ಮತ್ತು ಬೇಸಿಗೆ ಹಂಗಾಮು	ರಾಜ್ಯದ ಎಲ್ಲಾ ಜಿಲ್ಲೆಗಳ 0.52 ಲಕ್ಷ	354.16	0.16 ಲಕ್ಷ	346.40

ಇ) ಹೌದು. ಮಾರ್ಗಸೂಚಿಯಂತೆ ಖಾಸಗಿ ವಿಮಾ ಕಂಪನಿಗಳು ಈ ವಿಷಯದಲ್ಲಿ ರೈತರಿಗೆ ಸಹಕರಿಸುತ್ತಿವೆ.

ಈ) ಒಟ್ಟು ರಾಷ್ಟ್ರೀಯ ಕೃಷಿ ವಿಮಾ ಯೋಜನೆಯಡಿ 2000–01 ನೇ ಸಾಲಿನಿಂದ 2013–14ರ ಮುಂಗಾರು ಹಂಗಾಮಿನವರೆಗೆ 3.26 ಲಕ್ಷ ಫಲಾನುಭವಿ ರೈತರಿಗೆ ₹ 18930.70 ಲಕ್ಷಗಳ ಬೆಳೆ ವಿಮಾ ನಷ್ಟ ಪರಿಹಾರವನ್ನು ಪಾವತಿಸಲಾಗಿದೆ.

ಖಾಸಗಿ ಸಂಸ್ಥೆಗಳಿಗೆ ಸಂಬಂಧಿಸಿದಂತೆ, 2011–12ನೇ ಹಿಂಗಾರು ಹಂಗಾಮಿನಲ್ಲಿ ICICI Lombard General Insurance Company ಪಾಲ್ಗೊಂಡಿದ್ದು, 17055 ರೈತರಿಗೆ ₹ 978.81 ಲಕ್ಷ ವಿಮಾ ನಷ್ಟ ಪರಿಹಾರ ನೀಡಲಾಗಿದೆ.

ಉಳಿದ ವರ್ಷಗಳಲ್ಲಿ ಭಾರತ ಸರ್ಕಾರದ ಅಂಗ ಸಂಸ್ಥೆಯಾದ AIC ಯವರು ವಿಮಾ ಯೋಜನೆಯನ್ನು ಜಾರಿಗೊಳಿಸಿದ್ದು 308945 ರೈತರಿಗೆ 17951.89 ಲಕ್ಷ ರೂ.ಗಳ ವಿಮಾ ನಷ್ಟ ಪರಿಹಾರ ನೀಡಲಾಗಿದೆ.

ಸಂಪರ್ಕ ಸೇತುವೆಗಳನ್ನು ನಿರ್ಮಿಸುವ ಕುರಿತು

1843(1379); ಶ್ರೀ ದೊಡ್ಡಮನಿ ರಾಮಕೃಷ್ಣ ಸಿದ್ದಲಿಂಗಪ್ಪ (ಶಿರಹಟ್ಟಿ)

ಅ) ಶಿರಹಟ್ಟಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಸ್ತೆಗೆ ಸಂಪರ್ಕ ಸೇತುವೆಗಳನ್ನು ನಿರ್ಮಿಸಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಅವುಗಳು ಯಾವುವು;

ಇ) ಇನ್ನೆಷ್ಟು ದಿನಗಳಲ್ಲಿ ಶಿರಹಟ್ಟಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ರಸ್ತೆ ಸಂಪರ್ಕ ಸೇತುವೆಗಳನ್ನು ನಿರ್ಮಾಣ ಮಾಡಲಾಗುವುದು?

ಡಾ॥ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು)

ಅ) ಬಂದಿದೆ.

ಆ) ಶಿರಹಟ್ಟಿ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿ ಅರಭಾವಿ – ಚಳ್ಳಕೇರಿ ರಾಜ್ಯ ಹೆದ್ದಾರಿ 45 ರಲ್ಲಿಯ ಈ ಕೆಳಗಿನ ಚೈನೇಜ್‌ಗಳಲ್ಲಿ ರಸ್ತೆ ಸಂಪರ್ಕ ಸೇತುವೆಗಳನ್ನು ಅಳವಡಿಸಿಕೊಳ್ಳಲಾಗಿದೆ.

ಕ್ರ. ಸಂ.	ಚೈನೇಜ್	ವಿವರ	ಹಂತ	ಸ್ಥಳ (ಗ್ರಾಮ)	ಯಾವುದಕ್ಕೆ ಅಡ್ಡವಾಗಿ ನಿರ್ಮಿಸಿದೆ
1	29+570	ಕಿರು ಸೇತುವೆ	ಮುಕ್ತಾಯವಾಗಿದೆ	ಬರದೂರನಿಂದ 1.00 ಕಿ.ಮೀ ಮುಂಡರಗಿ ಕಡೆಗೆ	ಸ್ಟೀಮ್
2	29+742	ಎಚ್.ಪಿ ಕಲ್ವರ್ಟ	ಮುಕ್ತಾಯವಾಗಿದೆ	ಬರದೂರನಿಂದ 1.142 ಕಿ.ಮೀ ಮುಂಡರಗಿ ಕಡೆಗೆ	ನಾಲಾ
3	30+397	ಎಚ್.ಪಿ ಕಲ್ವರ್ಟ	ಮುಕ್ತಾಯವಾಗಿದೆ	ಬರದೂರನಿಂದ 1.80 ಕಿ.ಮೀ ಮುಂಡರಗಿ ಕಡೆಗೆ	ನಾಲಾ
4	30+693	ಬಾಕ್ಸ್ ಕಲ್ವರ್ಟ	ಮುಕ್ತಾಯವಾಗಿದೆ	ಬರದೂರನಿಂದ 2.00 ಕಿ.ಮೀ ಮುಂಡರಗಿ ಕಡೆಗೆ	ನಾಲಾ
5	31+190	ಬಾಕ್ಸ್ ಕಲ್ವರ್ಟ	ಮುಕ್ತಾಯವಾಗಿದೆ	ಎಸ್.ಎಸ್.ಪಾಟೀಲ ನಗರ	ನಾಲಾ
6	31+787	ಸ್ಲ್ಯಾಬ್ ಕಲ್ವರ್ಟ	ಪ್ರಗತಿಯಲ್ಲಿದೆ	ಎಸ್.ಎಸ್.ಪಾಟೀಲ ನಗರ	ನೀರಿನ ಪೈಪ್ ಲೈನ್
7	31+886	ಕಿರು ಸೇತುವೆ	ಮುಕ್ತಾಯವಾಗಿದೆ	ಹೊಸ ನ್ಯಾಯಾಲಯ ಸಂಕೀರ್ಣ	ಸ್ಟೀಮ್
8	33+580	ಎಚ್.ಪಿ ಕಲ್ವರ್ಟ	ಪ್ರಾರಂಭಿಸಲಾಗುವುದು	ಹೆಸರೂರು ಕ್ರಾಸ್	ಡ್ರೈನೇಜ್ ನಾಲಾ

ಮುಂಡರಗಿ ತಾಲ್ಲೂಕಿನಲ್ಲಿ ಆರ್‌ಐಡಿಎಫ್–20 ರ ಅಡಿಯಲ್ಲಿ ಡಂಬಳ ಕಲಕೇರಿ ರಸ್ತೆಯ ಕಲಕೇರಿ ಗ್ರಾಮದ ಹತ್ತಿರ ₹ 1.75 ಕೋಟಿ ಮೊತ್ತದಲ್ಲಿ ಅನುಮೋದನೆಯಾಗಿದ್ದು ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಇ) ಮೇಲಿನ ಕ್ರಮ ಸಂಖ್ಯೆ 6 ಮತ್ತು 8 ರಲ್ಲಿಯ ಸೇತುವೆಗಳನ್ನು ಜುಲೈ 2015 ರ ಅಂತ್ಯದೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಬೆಳೆ ವಿಮೆ ಬಗ್ಗೆ

1844(1380); ಶ್ರೀ ದೊಡ್ಡಮನಿ ರಾಮಕೃಷ್ಣ ಸಿದ್ದಲಿಂಗಪ್ಪ (ಶಿರಹಟ್ಟಿ)

ಅ) ಶಿರಹಟ್ಟಿ ಮತ ಕ್ಷೇತ್ರದ ಎಷ್ಟು ಜನ ರೈತರು ಯಾವ ಯಾವ ಬೆಳೆಗಳ ಮೇಲೆ ಬೆಳೆ ವಿಮೆ ಮಾಡಿಸಿದ್ದಾರೆ; ಈ ಕುರಿತು ವಿವರ ಒದಗಿಸುವುದು;

ಆ) ಸುಮಾರು 6–8 ವರ್ಷಗಳಿಂದ ಯಾವುದೇ ಬೆಳೆ ವಿಮೆ ಈ ಮತ ಕ್ಷೇತ್ರದ ರೈತರಿಗೆ ಲಭಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಪ್ರಸಕ್ತ ವರ್ಷದಲ್ಲಿ ಹೆಚ್ಚಿನ ಮಳೆಯಿಂದ ರೈತರು ಬೆಳೆದ ಬೆಳೆಗಳು ಹೆಚ್ಚಿನ ಪ್ರಮಾಣದಲ್ಲಿ ಹಾನಿಗೊಳಗಾಗಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ರೈತರು ಅನುಭವಿಸಿರುವ ಹಾನಿಯನ್ನು ತುಂಬಿಸಿಕೊಡಲು ಸರ್ಕಾರ ಅನುಸರಿಸುತ್ತಿರುವ ಮಾನದಂಡಗಳೇನು;

ಉ) ಈ ವೇಳೆಯಲ್ಲಾದರೂ ಶಿರಹಟ್ಟಿ ಭಾಗದ ರೈತರು ಬೆಳೆವಿಮೆಯನ್ನು ನಿರೀಕ್ಷಣೆ ಮಾಡಬಹುದೇ?